ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

**Friday, September 23rd, 2011**

# ಜೈನ್ ವಿವಿಯಲ್ಲಿ ಏರೋಸ್ಪೈಸ್ ಕೋರ್ಸ್

ಬೆಂಗಳೂರು, ಸೆ.23-ನಗರದ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಜೈನ್ ವಿಶ್ವವಿದ್ಯಾನಿಲಯದಲ್ಲಿ ನೂತನ ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಏರೋ ಸ್ಪೈಸ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕೋರ್ಸ್ ಆರಂಭಗೊಳ್ಳಲಿದೆ.

ಸೆಪ್ಟೆಂಬರ್ 25 ರಂದು ಜೈನ್ ಗ್ಲೋಬಲ್ ಕ್ಯಾಂಪಸ್‌ನಲ್ಲಿ ಈ ಕೋರ್ಸ್‌ನ್ನು ವಿಜ್ಞಾನಿ ಡಾ.ಕೆ.ಕಸ್ತೂರಿ ರಂಗನ್ ಉದ್ಘಾಟಿಸಲಿದ್ದಾರೆ.

ಈ ಕೋರ್ಸ್‌ನಲ್ಲಿ ಮುಖ್ಯವಾಗಿ ಡಿಪ್ಲೊಮಾ, ಪದವಿ ಪೂರ್ವ, ಸ್ನಾತಕೋತ್ತರ, ಸಂಶೋಧನೆ, ಏರೋಸ್ಪೈಸ್, ಡಿಪ್ಲೊಮಾ ಪ್ರೋಗ್ರಾಮ್, ಏರೋಡೈನಾಮಿಕ್ಸ್ ಸೇರಿದಂತೆ ಇನ್ನಿತರ ಕೋರ್ಸ್‌ಗಳು ಇದರಡಿ ಬರಲಿದೆ.

ವಿದೇಶದಲ್ಲಿರುವಂತೆ ನಮ್ಮ ದೇಶದಲ್ಲಿಯೂ ಜಾಗತಿಕ ಶಿಕ್ಷಣ ನೀಡಬೇಕೆಂಬ ಉದ್ದೇಶದಿಂದ ಈ ಕೋರ್ಸ್‌ಅನ್ನು ಆರಂಭಿಸಲು ಮುಂದಾಗಿರುವುದಾಗಿ ಎಚ್‌ಎಎಲ್‌ನ ಮಾಜಿ ಅಧ್ಯಕ್ಷ ಡಾ.ಸಿ.ಜೆ.ಕೃಷ್ಣದಾಸ್ ಅಯ್ಯರ್ ತಿಳಿಸಿದರು.